**Code No. 20 Y**

**ವಾಣಿಜ್ಯ ಪರೀಕ್ಷೆಗಳು**

# ಕನ್ನಡ ಶೀಘ್ರಲಿಪಿ – ಪ್ರಥಮ ದರ್ಜೆ – ದ್ವಿತೀಯ ಪತ್ರಿಕೆ
# (ಸೂತ್ರಗಳು)

ಜನವರಿ / ಫೆಬ್ರವರಿ, 2020

ಸಮಯ : 1 ಗಂಟೆ 30 ನಿಮಿಷಗಳು

ಅಂಕಗಳು : 100

***ಸೂಚನೆ :*** ಉತ್ತರಗಳು ಸಂಕ್ಷಿಪ್ತ ಹಾಗೂ ನೇರವಾಗಿರಬೇಕು.

1. 'ಹ' ಪ್ರಯೋಗಗಳನ್ನು ಉದಾಹರಣೆಗಳೊಂದಿಗೆ ವಿವರಿಸಿ ಬರೆಯಿರಿ. 10

2. ದ್ವಿರೂಪ ವರ್, ತರ್, ದರ್ ಗಳನ್ನು ಉದಾಹರಣೆಗಳೊಂದಿಗೆ ವಿವರಿಸಿ. 10

3. ದ್ವಿರೂಪ ವ್ಯಂಜನ 'ರ' ವನ್ನು ಉದಾಹರಣೆಗಳೊಂದಿಗೆ ವಿವರಿಸಿ. 10

4. **ಈ ಕೆಳಗಿನವುಗಳಲ್ಲಿ ಯಾವುದಾದರೂ ನಾಲ್ಕಕ್ಕೆ ಟಿಪ್ಪಣಿ ಬರೆಯಿರಿ :** 4 × 5 = 20

   ಅ) ಸ್ವರ ಚಿಹ್ನೆಗಳು

   ಆ) ಸಣ್ಣ ಮತ್ತು ದೊಡ್ಡ ಕುಣಿಕೆಗಳ ಅಂತ್ಯ ಪ್ರತ್ಯಯಗಳು

   ಇ) 'ಲ' ಕೊಕ್ಕೆಯುಳ್ಳ ಸರಳ ರೇಖಾಕ್ಷರಗಳಿಗೆ ವೃತ್ತ ಸೇರಿಸುವಿಕೆ

   ಈ) ವ್ಯಂಜನಾಕ್ಷರಗಳ ಪಟ್ಟಿ

   ಉ) 'ವ' ಕೊಕ್ಕೆ

5. **ಈ ಕೆಳಗಿನವುಗಳಲ್ಲಿ ಯಾವುದಾದರೂ ಐದು ಪದಗಳಿಗೆ ಸಂಕ್ಷೇಪಣೆ ಬರೆಯಿರಿ :** 5 × 1 = 5

   ಅ) ದಿಗ್ಮಂಡಲ

   ಆ) ಇತೋಪ್ಯತಿಶಯ

   ಇ) ಶೀಘ್ರಲಿಪಿ

   ಈ) ಬ್ರಾಹ್ಮಣೇತರ

   ಉ) ಹೃದಯಂಗಮ

   ಊ) ವರ್ಣಾಶ್ರಮಧರ್ಮ

6. **ಈ ಕೆಳಗಿನವುಗಳಲ್ಲಿ ಯಾವುದಾದರೂ ಐದಕ್ಕೆ ಪದಗಳ ಸಮೂಹ ಬರೆಯಿರಿ :** 5 × 1 = 5

ಅ) ಕಾಮ, ಕ್ರೋಧ, ಲೋಭ, ಮೋಹ, ಮದ, ಮಾತ್ಸರ್ಯ

ಆ) ಸತ್ಕಾರ ಕೂಟ

ಇ) ಡಿವಿಜನಲ್ ಕಮೀಷನರ್

ಈ) ಇಂಡಿಯಾ ಸರ್ಕಾರ

ಉ) ರಾಷ್ಟ್ರಘಾತುಕ ಕೃತ್ಯಗಳು

ಊ) ಉತ್ತರ ಹಿಂದೂಸ್ಥಾನ

7. **ಈ ಕೆಳಗಿನವುಗಳಲ್ಲಿ ಯಾವುದಾದರೂ ಐದಕ್ಕೆ ಛೇದಿಸುವಿಕೆ ಪದಗಳನ್ನು ಬರೆಯಿರಿ :** 5 × 1 = 5

ಅ) ಏತನ್ಮಧ್ಯೆ

ಆ) ಲಂಚರುಷುವತ್ತು

ಇ) ಒಂದೇ ತಾಯಿಯ ಮಕ್ಕಳು

ಈ) ಸರ್ಕಾರದ ಗಮನಕ್ಕೆ ಬಂದಿದೆ

ಉ) ದ್ವಿತೀಯ ಮತ್ತು ತೃತೀಯ ಪಂಚವಾರ್ಷಿಕ ಯೋಜನೆ

ಊ) ಕ್ಷಾಮ ಪರಿಹಾರ ಕಾಮಗಾರಿಗಳು

8. **ಈ ಕೆಳಗಿನ ಖಾಲಿ ಜಾಗಗಳನ್ನು ಸೂಕ್ತ ಉತ್ತರಗಳಿಂದ ಭರ್ತಿ ಮಾಡಿ :** 5 × 1 = 5

ಅ) 'ಲ' ರೇಖಾಕ್ಷರದ ಆದಿಯಲ್ಲಿ 'ವ' ಅಕ್ಷರ ಬಂದರೆ ಅದನ್ನು ಒಂದು ...................... ಸೂಚಿಸಬೇಕು.

ಆ) ರೇಖಾಕ್ಷರದ ಆರಂಭದಲ್ಲಿ 'ಮ' ಅನುಸ್ವಾರ ಮತ್ತು 'ಗ' ರೇಖಾಕ್ಷರವನ್ನು ಬರೆದರೆ ಅದು, "......................" ಎಂಬ ಉಪಸರ್ಗವನ್ನು ಸೂಚಿಸುತ್ತದೆ.

ಇ) ದ್ವಿಸ್ವರದ ಜೊತೆಗೆ ಇನ್ನೊಂದು ಸ್ವರ ಸೇರಿದಾಗ ದ್ವಿಸ್ವರಕ್ಕೆ ಒಂದು ಸಣ್ಣ ಗೆರೆಯನ್ನು ಸೇರಿಸಬೇಕು. ಇದಕ್ಕೆ ...................... ಎಂದು ಹೆಸರು.

ಈ) ರೇಖಾಕ್ಷರಗಳ ನಡುವೆ ಅಧೋಮುಖಾಕ್ಷರಗಳ ನಂತರ 'ಸಕರ, ಸಗರ' ಕೇಳಿ ಬಂದರೆ 'ಸ' ವೃತ್ತವನ್ನು ...................... ಬರೆಯಬೇಕು.

ಉ) ಶೇಕಡವನ್ನು ಸೂಚಿಸಲು ಆದಿಯಲ್ಲಿ ......................ವನ್ನು ಸಂಬಂಧಪಟ್ಟ ಅಂಕಿಯ ಪಕ್ಕದಲ್ಲಿ ಬರೆಯತಕ್ಕದ್ದು.

9. **ಈ ಕೆಳಗೆ ಕೊಟ್ಟಿರುವ ವಿಷಯವನ್ನು ಶೀಘ್ರಲಿಪಿಯಲ್ಲಿ ಅಗತ್ಯವಿರುವ ಕಡೆ ಸ್ವರಚಿಹ್ನೆಗಳನ್ನು ಉಪಯೋಗಿಸಿ ಬರೆಯಿರಿ :** 30

ನಮ್ಮ ದೇಶ ಹಳ್ಳಿಗಳ ನಾಡು ಎಂದರೆ ತಪ್ಪಿಲ್ಲ. ಇನ್ನು ನಮ್ಮ ದೇಶದ ಶೇಕಡಾ ಎಪ್ಪತ್ತರಷ್ಟು ಜನ ಹಳ್ಳಿಗಳಲ್ಲೇ ವಾಸ ಮಾಡುತ್ತಿದ್ದಾರೆ. ಆದ್ದರಿಂದ ಹಳ್ಳಿಗಳ ಅಭಿವೃದ್ಧಿ ನಮ್ಮ ದೇಶದ ಜನರ ನೆಮ್ಮದಿಗೆ ಅತ್ಯಂತ ಅವಶ್ಯಕ. ಇಂದಿಗೂ ಸಹ ನಮ್ಮ ದೇಶದ ಅನೇಕ ಹಳ್ಳಿಗಳಲ್ಲಿ ಮನುಷ್ಯರು ಮತ್ತು ಪ್ರಾಣಿಗಳಿಗೂ ಕುಡಿಯುವ ನೀರಿನ ತೊಂದರೆ ಇದೆ. ಬೇಸಿಗೆ ಕಾಲ ಬಂದರೆ ಪ್ರಾಣಿಗಳು ಮತ್ತು ಮನುಷ್ಯರೂ ನೀರಿಗೆ ತೊಂದರಂಪಡುತ್ತಿದ್ದಾರೆ. ಸರ್ಕಾರ ಕುಡಿಯುವ ನೀರಿನ ಸಮಸ್ಯೆ ನೀಗಿಸಲು ಅತ್ಯಂತ ಹೆಚ್ಚಿನ ಪ್ರಾಮುಖ್ಯತೆ ಕೊಡಬೇಕು. ಜನ ಸರ್ಕಾರದ ಸಹಾಯಕ್ಕೆ ಕಾಯದೇ ತಾವೇ ತಮ್ಮ ಹಳ್ಳಿಯ ಕೆರೆ, ಕುಂಟೆ, ಮಳೆ ನೀರು ನಿಲ್ಲಲು ಒಡ್ಡುಗಳನ್ನು ನಿರ್ಮಿಸಿ ಹಳ್ಳಿಯ ಅಂತರ್ಜಲ ಹೆಚ್ಚಿಸಿದರೆ ಬೇಸಿಗೆಯ ಕಾಲದಲ್ಲಿ ನೀರಿಗೆ ಹೆಚ್ಚು ತೊಂದರೆಯಾಗುವುದಿಲ್ಲ.

ಇಂದು ಪ್ರಭಾವಿ ವ್ಯಕ್ತಿಗಳು ಕೆರೆಗಳ ಅತಿಕ್ರಮಣ ಮಾಡಿ ಕೆರೆಯ ಜಮೀನುಗಳನ್ನು ವ್ಯವಸಾಯಕ್ಕೆ ಮತ್ತು ಉದ್ಯಮಗಳಿಗೆ ಉಪಯೋಗಿಸುತ್ತಿದ್ದಾರೆ. ಇದರಿಂದ ಭೂಮಿಯಲ್ಲಿ ಅಂತರ್ಜಲ ಕಡಿಮೆಯಾಗಿ ತೊಂದರೆಯಾಗುತ್ತದೆ. ಹಳ್ಳಿಯವರೆಲ್ಲಾ ಒಗ್ಗಟ್ಟಾಗಿ ಕೆರೆಗಳ ಅತಿಕ್ರಮಣ ತಡೆಯಬೇಕು. ಹಳ್ಳಿಗಳಲ್ಲಿ ವ್ಯವಸಾಯದ ಜೊತೆಗೆ ಜನ ಹೈನುಗಾರಿಕೆ, ಪುಷ್ಪೋದ್ಯಮ, ತೋಟಗಾರಿಕೆ, ಮರಗೆಲಸ, ಗೃಹ ಕೈಗಾರಿಕೆಗಳು ಮುಂತಾದ ಉಪ ಕಸುಬುಗಳಲ್ಲಿ ಪ್ರವೀಣರಾಗಲು ಸರ್ಕಾರ ವ್ಯವಸ್ಥೆ ಮಾಡಬೇಕು.

ಗುಜರಾತ್ ರಾಜ್ಯದಲ್ಲಿ ಸುಮಾರು ಎಂಟುನೂರಕ್ಕೂ ಹೆಚ್ಚು ವೃತ್ತಿಗಳಲ್ಲಿ ಜನರಿಗೆ ತರಬೇತಿಯನ್ನು ನೀಡುತ್ತಿದ್ದಾರೆ. ಇದರಿಂದ ಹಳ್ಳಿಗಳ ಕಡೆ ನಿರುದ್ಯೋಗವು ಸಾಕಷ್ಟು

ಕಡಿಮೆಯಾಗಿದೆ. ಇದನ್ನು ಎಲ್ಲಾ ರಾಜ್ಯಗಳವರೂ ಅನುಕರಣೆ ಮಾಡಬಹುದು. ಆದ್ದರಿಂದ ಪ್ರತಿಯೊಬ್ಬರೂ ಯಾವುದಾದರೂ ಒಂದು ವೃತ್ತಿಯಲ್ಲಿ ನಿಪುಣರಾಗಿ, ಉತ್ತಮ ಆದಾಯ ಗಳಿಸಿ ಸುಖಜೀವನ ನಡೆಸಲು ಸರ್ಕಾರ ಹೆಚ್ಚಿನ ವೃತ್ತಿಶಿಕ್ಷಣ ತರಬೇತಿ ಶಾಲೆ, ಕಾಲೇಜುಗಳನ್ನು ತೆರೆಯಬೇಕು. ಹೀಗೆ ಹಳ್ಳಿಗಳು ಅಭಿವೃದ್ಧಿಯಾದರೆ ಭಾರತ ದೇಶ ಅಭಿವೃದ್ಧಿ ಹೊಂದಲು ಸಹಾಯವಾಗುತ್ತದೆ.